ದಿನಾಂಕ 13-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಪಿ., ವಕೀಲರವರಿಂದಃ

7. ನಿಪಿ.12 ಮತ್ತು 13 ರಲ್ಲಿ ಉಲ್ಲೇಖಿಸಿರುವ ಮರಣ ಶಾಸನ ಹಾಗೂ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿದ ಮರಣ ಶಾಸನ ಒಂದೇ ಎಂದರೆ ಸಾಕ್ಷಿ ಸದರಿ ಮರಣ ಶಾಸನ ಇದ್ದಿರಬಹುದು ಎಂದು ನಿಪಿ.12 ಮತ್ತು 13 ರಲ್ಲಿ ನಾನು ಹೇಳಿದ್ದೇನೆ ಎನ್ನುತ್ತಾರೆ. 1978 ರಿಂದ 2001 ರ ತನಕ ನನ್ನ ಮೃತ ಸಹೋದರನಿಗೆ ಯಾವೆಲ್ಲಾ ಬ್ಯಾಂಕುಗಳಲ್ಲಿ ಖಾತೆ ಇತ್ತು ಎಂದು ನನಗೆ ಈಗ ಹೇಳಲು ಸಾಧ್ಯವಿಲ್ಲ. 1995 ರಲ್ಲಿ ಸದರಿಯವರು ತೆರಿಗೆದಾರರ ವೇದಿಕೆಯ ಅಧ್ಯಕ್ಷರಾಗಿದ್ದು, ಅವರಿಗೆ ಉಡುಪಿ ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಸಿ-134 ನಂಬರಿನ ಖಾತೆ ಇತ್ತು ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ಸದರಿ ಖಾತೆಯ ಪಾಸ್ ಪುಸ್ತಕ ಹಾಗೂ ಚೆಕ್ ಪುಸ್ತಕವನ್ನು ನನ್ನ ಮೃತ ಸಹೋದರ ವಾದಿಯ ಕೈಗೆ ನೀಡಿದ್ದರು ಎಂದರೆ ಸುಳ್ಳು. ನನ್ನ ಮೃತ ಸಹೋದರ ಮೃತ ಪಡುವ ಪೂರ್ವದಲ್ಲಿ ಎಷ್ಟು ಬೆಲೆಯ ಸ್ಥಿರಾಸ್ತಿಯನ್ನು ಹೊಂದಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಆತ ಭೂಮಿ ಖರೀದಿಸುವಾಗ ಹಾಗೂ ಕಟ್ಟಡ ನಿರ್ಮಿಸುವಾಗ ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆತ ನನ್ನ ತಿಳುವಳಿಕೆ ಪ್ರಕಾರ ಆದಾಯ ತೆರಿಗೆ ಪಾವತಿಸುತ್ತಿದ್ದನು. 1978 ರಿಂದ 1999 ರ ತನಕ ಆತ ಭೂ ಖರೀದಿ ವ್ಯವಹಾರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಆತ ವ್ಯವಹಾರದ ಲೆಕ್ಕದ ಪುಸ್ತಕ ಮತ್ತು ವ್ಯವಹಾರದ ದಿನಚರಿ ಪುಸ್ತಕದ ಆಧಾರದ ಮೇಲೆ ಆದಾಯ ತೆರಿಗೆ ರಿಟರ್ನ್ ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ. ಯಾವ ದಾಖಲೆಗಳ ಆಧಾರದಲ್ಲಿ ರಿಟರ್ನ್ ಸಲ್ಲಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

8. ವಾದಿ ಮತ್ತು ನನ್ನ ಮೃತ ಸಹೋದರ ಪ್ರಭಾಕರ ಆಚಾರ್ಯ ಸ್ನೇಹಿತರು ಎಂದರೆ ಸರಿಯಲ್ಲ, ಪರಿಚಯಸ್ಥರು. 1 ನೇ ಪ್ರತಿವಾದಿ ಶಂಕರ ಆಚಾರ್ಯರವರಿಗೆ 1993 ರ ಸಾಲಿನಲ್ಲಿ ಬರೆದುಕೊಟ್ಟ ಕ್ರಯ ದಸ್ತಾವೇಜುಗಳಿಗೆ ಮೃತ ಪ್ರಭಾಕರ ಆಚಾರ್ಯ ಸಾಕ್ಷಿಯಾಗಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1994 ರ ಸಾಲಿನಲ್ಲಿ ಶ್ರೀಧರ ಆಚಾರ್ಯ ಹಾಗೂ

ಅಮಿತ ಆಚಾರ್ಯ ಇವರಿಗೆ 1 ನೇ ಪ್ರತಿವಾದಿ ಬರೆದುಕೊಟ್ಟ ಕ್ರಯ ದಸ್ತಾವೇಜುಗಳಿಗೆ ಮೃತ ಪ್ರಭಾಕರ ಆಚಾರ್ಯ ಸಾಕ್ಷಿಯಾಗಿ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಜೈಲಿನಲ್ಲಿ ಇದ್ದ ಸಮಯ ಆತನ ಹೆಂಡತಿ ಮೂಲಕ ಮೃತ ಪ್ರಭಾಕರ ಆಚಾರ್ಯ ಪರಿಚಯ ಆಗಿರುತ್ತಾನೆ. ಸದರಿ ಸಮಯ ಪ್ರಭಾಕರ ಆಚಾರ್ಯ ಕೂಡ ಜೈಲಿನಲ್ಲಿ ಇದ್ದರು ಎಂದರೆ ಸರಿಯಲ್ಲ. ವಾದಿ ಜೈಲಿನಲ್ಲಿ ಇದ್ದ ಪ್ರಕರಣದ ನಂಬರ್ ನನಗೆ ಗೊತ್ತಿಲ್ಲ. ಪ್ರಭಾಕರ ಆಚಾರ್ಯ ಕಡಿಮೆ ಸಮಯದಲ್ಲಿ ಕೋಟಿಗಟ್ಟಲೆ ಆಸ್ತಿ ಖರೀದಿಸಿದ ಬಗ್ಗೆ ಸಾರ್ವಜನಿಕರಿಗೆ ಅವರ ಮೇಲೆ ಗುಮಾನಿ ಇತ್ತು ಎಂದರೆ ಸರಿಯಲ್ಲ.

9. ಉಡುಪಿ ವಕೀಲರ ಸಂಘದ ಈಗಿನ ಕಾರ್ಯದರ್ಶಿ ರೋನಾಲ್ಡ್ ಪ್ರವೀಣ್ ಕುಮಾರ್ 199 ರಲ್ಲಿ ಉಡುಪಿ ನಗರ ಸಭೆಯ ಉಪಾಧ್ಯಕ್ಷ ಆಗಿದ್ದ ವಿಷಯ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಯ ಕೊಲೆಯತ್ನ ಪ್ರಕರಣದಲ್ಲಿ ವಾದಿ ಹಾಗೂ ಪ್ರಭಾಕರ ಆಚಾರ್ಯ ಜೈಲಿನಲ್ಲಿ ಇದ್ದರು ಎಂದರೆ ಸುಳ್ಳು. ನಾನು ನಿಪಿ.4 ನ್ನು ನೋಡಿ ತಿಳಿದುಕೊಂಡಿರುತ್ತೇನೆ. ಸದರಿ ಪ್ರಕರಣದಲ್ಲಿ 3 ಮತ್ತು 4 ನೇ ಆರೋಪಿ ಎಂದರೆ ನನ್ನ ಸಹೋದರ ಹಾಗೂ ವಾದಿ ಎಂದರೆ ಸರಿ.

10. ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮತ್ತು ಬಿ ಶೆಡ್ಯೂಲ್ ಕಟ್ಟಡವನ್ನು ಕಟ್ಟಲು ವಾದಿಯಿಂದ ಪ್ರಭಾಕರ ಆಚಾರ್ಯ ಹಂತ ಹಂತವಾಗಿ ಹಣವನ್ನು ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು ಪಡೆದುಕೊಂಡ ಬಗ್ಗೆ ಆದಾಯ ತೆರಿಗೆ ರಿಟರ್ನ್ ನಲ್ಲಿ ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಕಟ್ಟಡ ಕಟ್ಟಲು ನಗರಸಭೆಯಿಂದ ಪ್ರಾರಂಬಿಕ ಪ್ರಮಾಣ ಪತ್ರ ಸಿಕ್ಕಿದ ವರ್ಷ ಗೊತ್ತಿಲ್ಲ. ಸದರಿ ಕಟ್ಟಡದ ಬಗ್ಗೆ ಆಕ್ಯುಪೆನ್ಸಿ ಪ್ರಮಾಣ ಪತ್ರ ಸಿಕ್ಕಿದ ವರ್ಷ ಕೂಡ ಗೊತ್ತಿಲ್ಲ. ನನ್ನ ಮೃತ ಸಹೋದರ ಪ್ರಭಾಕರ ಆಚಾರ್ಯರ ಆದಾಯ ತೆರಿಗೆಯ ಎಲ್ಲಾ ರಿಟರ್ನ್ ಅನ್ನು ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ಅವುಗಳು ಎಲ್ಲಿ ಇವೆ ಗೊತ್ತಿಲ್ಲ ಎನ್ನುತ್ತಾರೆ. ವಾದಿ ಹಾಗೂ ಪ್ರಭಾಕರ ಆಚಾರ್ಯ ಸ್ನೇಹಿತರಾದ ಕಾರಣ ವಾದಿಗೆ ಸಹಾಯವಾಗಲಿ ಎಂದು ನಿಪಿ.11 ರಂತೆ ಮರಣ ಶಾಸನ ಬರೆದಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಭಾಕರ ಆಚಾರ್ಯ ಯಾವುದೇ ರೋಗದಿಂದ ಬಳಲುತ್ತಿರಲಿಲ್ಲ. ಅವರು ಜೀವಂತ ಇದ್ದಾಗ ಯಾರಾದರೂ ಮೋಸದಿಂದ,

ಬಲವಂತದಿಂದ, ಒತ್ತಾಯದಿಂದ ಆಸ್ತಿ ದಾಖಲೆಯನ್ನು ಅವರಿಂದ ಬರೆಸಿದ ಬಗ್ಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಅಂತಹ ಪ್ರಮೇಯ ಬಂದಿಲ್ಲ, ವಾದಿ ಈಗ ಮರಣ ಶಾಸನವನ್ನು ಸೃಷ್ಟಿಸಿದ್ದಾನೆ ಎನ್ನುತ್ತಾನೆ. ನಿಪಿ.11 ಮರಣ ಶಾಸವನ್ನು ನ್ಯಾಯಾಲಯದಲ್ಲೇ ನಾನು ಪ್ರಥಮ ಬಾರಿಗೆ ನೋಡಿರುತ್ತೇನೆ. ದಿನಾಂಕ, ತಿಂಗಳು, ಇಸವಿ ಹೇಳಲು ಸಾಧ್ಯವಿಲ್ಲ. ನಿಪಿ.11 ನ್ನು ಸುಬ್ರಹ್ಮಣ್ಯ ಭಟ್ ಬರೆದದ್ದು ಎಂದು ನಾನು ಹೇಳಿರುವುದಿಲ್ಲ. ಬದಲಿಗೆ ಸದರಿ ಸುಬ್ರಹ್ಮಣ್ಯ ಭಟ್ ಸೇರಿಕೊಂಡು ಬ್ರಹ್ಮಾವರದಲ್ಲಿ ನೋಂದಾವಣಿ ಮಾಡಿಸಿದ್ದಾರೆ ಎನ್ನುತ್ತಾರೆ. ಸದರಿಯವರು ಸೇರಿಕೊಂಡ ಬಗ್ಗೆ ನಾನು ನೋಡಿಲ್ಲ, ಆದರೆ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ವಿಷಯ ಯಾರು ತಿಳಿಸಿದ್ದರು ಎಂದು ನನಗೆ ಈಗ ನೆನಪಿಲ್ಲ. ನಿಪಿ.11 ಮರಣ ಶಾಸವನ್ನು 1 ನೇ ಪ್ರತಿವಾದಿ ಯಾವಾಗ ನೋಡಿದ್ದಾರೆ ಎಂದರೆ ಸಾಕ್ಷಿ, ಅವರಿಗೆ ಅದನ್ನು ನೋಡುವ ಅವಕಾಶ ಸಿಕ್ಕಿಲ್ಲ ಎನ್ನುತ್ತಾರೆ. ನಿಪಿ.11 ನ್ನು ವಕೀಲರಾದ ಗಣೇಶ್ ದೇವಾಡಿಗರವರು ಪ್ರಭಾಕರ ಆಚಾರ್ಯರ ಕೋರಿಕೆ ಮೇರೆಗೆ ದಸ್ತೂರು ಮಾಡಿ ಸಹಿ ಮಾಡಿದ್ದಾರೆ ಎಂದರೆ ಸುಳ್ಳು. ನಿಮಗೆ ಸದರಿ ಗಣೇಶ್ ದೇವಾಡಿಗರ ಸಹಿಯ ಪರಿಚಯ ಇದೆಯಾ ಎಂದರೆ ಸಾಕ್ಷಿ ನನಗೆ ಈಗ ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ.

11. ನಾನು ನಿಪಿ.13 ರ ಪುಟ ಸಂಖ್ಯೆ 3 ಖಂಡಿಕೆ 10 ರಲ್ಲಿ ಹೇಳಿದಂತೆ ಪ್ರಭಾಕರ ಆಚಾರ್ಯ ತಮ್ಮ ವ್ಯಾಜ್ಯಗಳ ನಿರ್ವಹಣೆಗಾಗಿ ವಾದಿಯ ಮೂಲಕ ಬೆಂಗಳೂರಿನ ವಕೀಲರುಗಳಿಗೆ ಸಹಿ ಮಾಡಿದ ಖಾಲಿ ಕಾಗದ ಕಳುಹಿಸಿಕೊಡುತ್ತಿದ್ದರು ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಖಾಲಿ ಸಹಿ ಮಾಡಿದ ದಾಖಲೆಗಳನ್ನು ಬಳಸಿ ನಿಪಿ.11 ನ್ನು ಸೃಷ್ಟಿಸಲಾಗಿದೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ.11 ರಲ್ಲಿನ ದಸ್ತಾವೇಜು ಬರಹಗಾರರಿಗೆ ಮಧ್ಯಪಾನದ ಹವ್ಯಾಸ ಉಳ್ಳವರು ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೇಳುವಂತೆ ನಿಪಿ.11 ಮರಣ ಶಾಸನದಲ್ಲಿ ಮೃತ ಪ್ರಭಾಕರ ಆಚಾರ್ಯರ ಸಹಿ ಇದೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಪ್ರಭಾಕರ ಆಚಾರ್ಯ ಮೃತ ಪಡುವ ಕಾಲಕ್ಕೆ ನನಗೆ ಯಾವುದೇ ಹಕ್ಕು ಇರುವುದಿಲ್ಲ. ಸದರಿಯವರ ಯಾವ ಪ್ರಕರಣದಲ್ಲೂ ನಾನು ನ್ಯಾಯವಾದಿಯಾಗಿ ಪ್ರತಿನಿಧಿಸಿಲ್ಲ ಎಂದರೆ ನನಗೆ ನೆನಪಿಲ್ಲ. ಪ್ರತಿವಾದ ಪತ್ರದಲ್ಲಿ ಹೇಳಿರುವ ಉಚ್ಚ ನ್ಯಾಯಾಲಯದ ಕೇಸುಗಳ ನಂಬರ್ ಗೊತ್ತಿಲ್ಲ ಆದರೆ ಉಡುಪಿ ನಗರಸಭೆಯ ವಿರುದ್ಧ ಪ್ರಕರಣಗಳು ಚಾಲ್ತಿಯಲ್ಲಿ ಇತ್ತು. ಸದರಿ ಪ್ರಕರಣದ

ವಕೀಲರುಗಳ ಹೆಸರು ನನಗೆ ನೆನಪಿಲ್ಲ, ಆದರೆ ಅವರು ಬೆಂಗಳೂರಿನವರು. ಪ್ರಭಾಕರ ಆಚಾರ್ಯ ಯಾವತ್ತೂ ಖಾಲಿ ಕಾಗದಗಳ ಮೇಲೆ ಸಹಿ ಮಾಡಿ, ವಾದಿ ಬಳಿ ಕೊಟ್ಟು, ಉಚ್ಚ ನ್ಯಾಯಾಲಯದ ವಕೀಲರಿಗೆ ನೀಡಲು ತಿಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ನಾನು ಸ್ವತಃ ನೋಡಿರುವುದಿಲ್ಲ. ಉಚ್ಚ ನ್ಯಾಯಾಲಯದ ಯಾವುದೇ ವಕೀಲರು ಪಕ್ಷಗಾರರಿಂದ ಖಾಲಿ ಕಾಗದಕ್ಕೆ ಸಹಿ ಮಾಡಿ ಪಡೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಅಂತಹ ನ್ಯಾಯವಾದಿಗಳ ಸಾಕ್ಷಿ ವಿಚಾರಣೆ ಮಾಡಿಸಬಹುದಾ ಎಂದರೆ ಆಗುವುದಿಲ್ಲ. ಪ್ರಭಾಕರ ಆಚಾರ್ಯ ರ ಸಹಿ ಇರುವ ಖಾಲಿ ಕಾಗದಗಳಿಗೆ ವಾದಿ ನಿಪಿ.11 ಒಕ್ಕಣೆಗಳನ್ನು ತುಂಬಿಸಿದ್ದು ಎಂದು 1 ನೇ ಪ್ರತಿವಾದಿ ವಾದಿಯ ವಿರುದ್ಧ ರಚಿಸಿದ ಆಪಾದನೆ ಸುಳ್ಳು ಎಂದರೆ ಸರಿಯಲ್ಲ.

12. ನಿಪಿ.11 ರ ಪ್ರಕಾರ ಕಂದಾಯ ಇಲಾಖೆಯವರು ವಾದಿ ಮತ್ತು ಪ್ರತಿವಾದಿಯರ ಹೆಸರಿಗೆ ಜಂಟಿ ಖಾತೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.3 ಮತ್ತು 5 ನ್ನು ನೋಡಿದ್ದೀರಾ ಎಂದರೆ ಸಾಕ್ಷಿ, ಈಗ ನೋಡಿದ್ದು, ಅವುಗಳು ವಜಾಗೊಂಡಿವೆ ಎನ್ನುತ್ತಾರೆ. ನನ್ನ ಪ್ರಕಾರ ಎ.ಸಿ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಸದರಿ ದಾಖಲೆಗಳು ವಜಾಗೊಂಡಿರುತ್ತವೆ. ಸದರಿ ಪ್ರಕರಣಗಳಲ್ಲಿ 1 ನೇ ಪ್ರತಿವಾದಿ ಪಕ್ಷಗಾರರು ಎಂದರೆ ನನಗೆ ನೆನಪಿಲ್ಲ. ಉಚ್ಚ ನ್ಯಾಯಾಲಯದ ಕೇಸ್ ನಂಬರ್ ಗೊತ್ತಿಲ್ಲ. ಉಚ್ಚ ನ್ಯಾಯಾಲಯ ತನ್ನ ರಿಟ್ ಅರ್ಜಿ ನಂಬ್ರ 7316/2007, ಈ ಪ್ರಕರಣದಲ್ಲಿ ಮರಣ ಶಾಸನದ ಸಿಂಧುತ್ವ ಇತ್ಯರ್ಥವಾದ ಬಳಿಕ ಕಂದಾಯ ದಾಖಲೆಗಳಲ್ಲಿ ವಾದಿಯ ಹೆಸರನ್ನು ಸೇರಿಸಲು ಅವಕಾಶ ಇದೆ ಎಂದು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.